**C.C. No.1189/2024**
**ಪಿ.ಡಬ್ಲ್ಯು–01 –H R Ravikumar**

<u>**ಸಾಕ್ಷಿಯನ್ನು ದಿನಾಂಕಃ 08.06.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**</u>

<u>**ಪಾಟೀ ಸವಾಲುಃ ಆರೋಪಿ ಪರ ಶ್ರೀ ಜಿ ಎನ್ ಎನ್ ವಕೀಲರಿಂದಃ**</u>

ಆರೋಪಿ ಹಾಗೂ ಅವರ ಗಂಡ ನನಗೆ ಸುಮಾರು ವರ್ಷಗಳಿಂದ ಪರಿಚಿತರು. ನಾನು ವ್ಯವಸಾಯ ಮಾಡಿಕೊಂಡಿರುತ್ತೇನೆ. ನಮ್ಮ ಹಾಗೂ ಆರೋಪಿಯ ಊರಿಗೂ ಸುಮಾರು 1 ಕಿ ಮೀ ಗಳ ಅಂತರ ಇರುತ್ತದೆ. ನನಗೆ ಪಿರ್ಯಾದುನಲ್ಲಿ ತಿಳಿಸಿದ ಸರ್ವೆ ನಂ.17/1 ರ 3 ಎಕರೆ 2 ಗುಂಟೆ ಜಮೀನಿನ ಜೊತೆಗೆ ಹತ್ತುವಾಳು ಗ್ರಾಮದ ಸರ್ವೆ ನಂ.26/1 ರಲ್ಲಿ 3 ಎಕರೆ 7 ಗುಂಟೆ ಜಮೀನು ಇರುತ್ತದೆ.

ಆರೋಪಿಯ ಗಂಡನಾದ ಶ್ರೀನಿವಾಸ ಸರ್ವೆ ನಂ.17/1 ರ 3 ಎಕರೆ 2 ಗುಂಟೆ ನನ್ನ ಜಮೀನನ್ನ ರೂ.38,12,500/– ಕ್ರಯದ ಪ್ರತಿಫಲಕ್ಕೆ ಖರೀದಿಸಲು ಒಪ್ಪಿ ಮಾತುಕತೆಯಾಗಿರುತ್ತದೆ. ಆ ಬಗ್ಗೆ ದಿನಾಂಕ 07.10.2022 ರಂದು ನೋಂದಾಯಿತವಲ್ಲದ ಕ್ರಯ ಒಪ್ಪಂದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ. ಸಾಕ್ಷಿ ಮುಂದುವರೆದು ದಿನಾಂಕ 06.10.2023 ಒಂದು ನೋಂದಣಿಯಾದ ಇನ್ನೊಂದು ನೋಂದಾಯಿತವಲ್ಲದ ಕ್ರಯ ಒಪ್ಪಂದ ಕರಾರು ಪತ್ರ ಬರೆದುಕೊಟ್ಟಿರುತ್ತೇನೆ. ಸದರಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸದರಿ ದಾಖಲೆಗಳಲ್ಲಿ ನಿಪಿ–1 ಹಾಗೂ 2 ಚೆಕ್ಕುಗಳ ಬಗ್ಗೆ ನಮೂದು ಇರುವುದಿಲ್ಲ. ಸದರಿ ಮೇಲೆ ಹೇಳಿದ ಕ್ರಯ ಒಪ್ಪಂದ ಕರಾರು ಪತ್ರಗಳಿಗೂ ಹಾಗೂ ನಿಪಿ–1 ಮತ್ತು 2 ರ ಚೆಕ್ಕುಗಳಿಗೂ ಯಾವುದೇ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿ–1 ಹಾಗೂ 2 ರ ಚೆಕ್ಕುಗಳಲ್ಲಿ ದಿನಾಂಕ 23.05.2024 ಎಂದು ನಮೂದು ಇರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದೇ ದಿನ ಕ್ರಯಪತ್ರ ನೋಂದಣಿಯಾಗಿದ್ದು ಅದೇ ದಿನ ಆರೋಪಿ ನಿಪಿ–1 ಹಾಗೂ 2 ಇನ್ನೊಂದು ಚೆಕ್ ಅನ್ನ ಅಂದರೆ ಒಟ್ಟು 3 ಚೆಕ್ಕುಗಳನ್ನು ನೀಡಿದ್ದು ಅವುಗಳಲ್ಲಿ ಒಂದು ಚೆಕ್ಕು ಮಾನ್ಯಗೊಂಡಿದ್ದು ನಿಪಿ–1 ಮತ್ತು 2 ರ ಚೆಕ್ಕುಗಳು ಅಮಾನ್ಯಗೊಂಡಿರುತ್ತವೆ ಎಂದು ನುಡಿಯುತ್ತಾರೆ. ನಿಪಿ–11 ರ ನೋಂದಾಯಿತ ಕ್ರಯಪತ್ರದಲ್ಲಿ ಸಂಪೂರ್ಣ ಕ್ರಯದ ಪ್ರತಿಫಲ ಹಣವನ್ನು ಪಡೆದ ಬಗ್ಗೆ ನಮೂದು ಇರುತ್ತದೆ ಎಂದರೆ ಸಾಕ್ಷಿಯು ಮೇಲೆ ಹೇಳಿದಂತೆ 3 ಚೆಕ್ಕುಗಳನ್ನು ನೀಡಿದ ನಂತರ ಆ ರೀತಿ ಬರೆಸಲಾಗಿದೆ ಎಂದು ನುಡಿಯುತ್ತಾರೆ.

ಒಟ್ಟು ಕ್ರಯದ ಪ್ರತಿಫಲವಾದ ರೂ.38,12,500/– ಎಷ್ಟು ಹಣ ಬಾಕಿ ಕೊಡಲು ಇದೆ ಎಂಬ ಬಗ್ಗೆ ಪ್ರತ್ಯೇಕವಾದ ಯಾವುದೇ ಅಗ್ರಿಮೆಂಟ್ ಬರೆಸಿಕೊಂಡಿರುವುದಿಲ್ಲ. ನಿಪಿ–10, 12 ಹಾಗೂ 13 ರಲ್ಲಿ ತಿಳಿಸಿರುವ ಸಂಪೂರ್ಣ ಕ್ರಯದ ಪ್ರತಿಫಲದ ಹಣ ನನಗೆ ತಲುಪಿರುತ್ತದೆ ಎಂದರೆ ಸಾಕ್ಷಿಯು ನಿಪಿ–1 ಹಾಗೂ 2 ರಲ್ಲಿ ತಿಳಿಸಿದ ಹಣವನ್ನು ಹೊರತುಪಡಿಸಿ ಉಳಿದ ಹಣ ಬಂದಿರುತ್ತದೆ

ಎಂದು ನುಡಿಯುತ್ತಾರೆ. ನನ್ನ ದೂರಿನಲ್ಲಿ ದಿನಾಂಕ 23.05.2024 ರಂದು ಆರೋಪಿಯು 5 ಲಕ್ಷದ ಎರಡು ಚೆಕ್ಕುಗಳನ್ನು ನೀಡಿರುವ ಬಗ್ಗೆ ನಮೂದಿಸಿರುತ್ತೇನೆ ಎಂದರೆ ಸಾಕ್ಷಿಯು ಆರೋಪಿಯು ಒಟ್ಟು 3 ಚೆಕ್ಕುಗಳನ್ನು ನೀಡಿದ್ದು ಅವುಗಳಲ್ಲಿ ಒಂದು ಚೆಕ್ಕು ಮಾನ್ಯಗೊಂಡಿದ್ದು ನಿಪಿ-1 ಮತ್ತು 2 ರ ಚೆಕ್ಕುಗಳು ಅಮಾನ್ಯಗೊಂಡಿರುತ್ತವೆ ಎಂದು ನುಡಿಯುತ್ತಾರೆ. ನಾನು, ಆರೋಪಿ ಹಾಗೂ ಅವರ ಗಂಡ ಹಲವು ವರ್ಷಗಳಿಂದ ಪರಿಚಿತರಾಗಿದ್ದು ಈ ಪ್ರಕರಣದಲ್ಲಿ ತಿಳಿಸಿರುವ ಕ್ರಯ ಒಪ್ಪಂದ ವ್ಯವಹಾರ ಅಲ್ಲದೇ ಹಿಂದೆ ಹಲವಾರು ಹಣಕಾಸಿನ ವ್ಯವಹಾರ ಮಾಡಿರುತ್ತೇವೆ ಎಂದರೆ ಸರಿಯಲ್ಲ.

ದಿನಾಂಕ 30.10.2023 ರಂದು ಆರೋಪಿಯಿಂದ ನನ್ನ ಖಾತೆಗೆ 2 ಲಕ್ಷ ಹಣ ಸಂದಾಯವಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅದು ಕ್ರಯಪತ್ರ ನೋಂದಾಯಿಸುವ ಮೊದಲೇ ಎಂದು ನುಡಿಯುತ್ತಾರೆ. ಅದೇ ರೀತಿ ದಿನಾಂಕ 04.06.2024 ರಂದು ನನ್ನ ಖಾತೆಗೆ ಆರೋಪಿಯಿಂದ 5 ಲಕ್ಷ ಹಣ ಸಂದಾಯ ಆಗಿರುತ್ತದೆ ಎಂದರೆ ಸರಿಯಲ್ಲ. ನನಗೆ ಕ್ರಯಪತ್ರ ನೋಂದಾಯಿಸುವವರೆಗೂ ಒಟ್ಟು ರೂ.12,50,000/- ಪಾವತಿಯಾಗಿದ್ದು ಅದರಲ್ಲಿ 2 ಲಕ್ಷಕ್ಕೆ ಚೆಕ್ಕು ಹಾಗೂ ಉಳಿದ ಮೊತ್ತ ನಗದು ರೂಪದಲ್ಲಿ ಬಂದಿರುತ್ತದೆ. ನಿಪಿ-11 ರ ಕ್ರಯಪತ್ರದ ಪ್ರಕಾರ ಆರೋಪಿ ಗಂಡ ಕೊಡಬೇಕಾದ 10 ಲಕ್ಷ ಹಣವನ್ನು 7 ಲಕ್ಷ ಚೆಕ್ಕಿನ ಮೂಲಕ ಹಾಗೂ 3 ಲಕ್ಷ ಹಣವನ್ನು ಸೊಮೇಶ್ ಎನ್ನುವ ವ್ಯಕ್ತಿಯ ಸಮಕ್ಷಮ ನಗದು ರೂಪದಲ್ಲಿ ನೀಡಿ ಸಂಪೂರ್ಣ ಹಣ ಪಾವತಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಪ್ರಕಾರ ನಿಪಿ-11 ರ ಕ್ರಯಪತ್ರದ ಸಂಪೂರ್ಣ ಕ್ರಯ ಪ್ರತಿಫಲದ ಹಣ ನನಗೆ ಪಾವತಿಯಾಗಿರುತ್ತದೆಯೇ ಎಂದರೆ ಸರಿಯಲ್ಲ. ಸದರಿ ನಿಪಿ-11 ರ ಕ್ರಯಪತ್ರ ಬರೆದುಕೊಟ್ಟ ದಿನ ಆರೋಪಿ ನನಗೆ ಯಾವುದೇ ನಿಪಿ-1 ಹಾಗೂ 2 ರ ಚೆಕ್ಕುಗಳನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-11 ರ ಕ್ರಯಪತ್ರ ಬರೆದುಕೊಟ್ಟ ದಿನ ಆರೋಪಿ ಹಾಜರಿರುವುದಿಲ್ಲ ಹಾಗೂ ಸದರಿ ಪತ್ರಕ್ಕೆ ಸಹಿ ಮಾಡಿರುವುದಿಲ್ಲ. ಸಾಕ್ಷಿ ಮುಂದುವರೆದು ಆರೋಪಿಯ ಗಂಡನಾದ ಶ್ರೀನಿವಾಸ್ ರವರೇ ಆರೋಪಿ ಸಹಿ ಮಾಡಿದ ಚೆಕ್ ಅನ್ನು ನೀಡಿರುತ್ತಾರೆಂದು ನುಡಿಯುತ್ತಾರೆ.

ದಿನಾಂಕ 23.05.2024 ರಂದು ಆರೋಪಿಯಾಗಲೀ ಅವರ ಗಂಡ ಶ್ರೀನಿವಾಸ ಆಗಲೀ ನಿಪಿ-1 ಹಾಗೂ 2 ರ ಚೆಕ್ಕುಗಳನ್ನು ನೀಡಿರುವುದಿಲ್ಲ ಬದಲಾಗಿ ಈ ಹಿಂದೆ ನನ್ನ ಹಾಗೂ ಆರೋಪಿಯ ಗಂಡನ ನಡುವೆ ಆದ ಬೇರೆ ಹಣಕಾಸಿನ ವ್ಯವಹಾರದಲ್ಲಿ ಸದರಿ ಶ್ರೀನಿವಾಸ್ ರವರು ಭದ್ರತೆಗಾಗಿ ನೀಡಿದ ಅವರ ಹೆಂಡತಿಯ ಚೆಕ್ ಅನ್ನು ನಾನು ದುರ್ಬಳಕೆ ಮಾಡಿಕೊಂಡು ಆರೋಪಿ ವಿರುದ್ಧ ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕ 23.05.2024 ರಂದು

ಆರೋಪಿಯಾಗಲೀ ಅವರ ಗಂಡನಾಗಲಿ ನಿಪಿ-1 ಹಾಗೂ 2 ರ ಚೆಕ್ಕನ್ನು ನೀಡಿರರುವುದಿಲ್ಲ ಹಾಗೂ ಆ ಕಾರಣಕ್ಕಾಗಿ ಆ ರೀತಿ ಚೆಕ್ಕು ನೀಡಿದ ಬಗ್ಗೆ ಯಾವುದೇ ದಾಖಲೆಯಲ್ಲಿ ನಮೂದು ಮಾಡಿರುವುದಿಲ್ಲ ಹಾಗೂ ಯವುದೇ ದಾಖಲೆಯನ್ನು ಬರೆಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಸದರಿ ಜಮೀನಿಗೆ ಸಂಬಂಧಿಸಿದಂತೆ ಕ್ರಯಪತ್ರವನ್ನು ಬರೆದುಕೊಟ್ಟ ನಂತರ ಸದರಿ ಜಮೀನಿನ ಮಾರುಕಟ್ಟೆ ಮೌಲ್ಯ ಇನ್ನು ಹೆಚ್ಚಾಗಿರುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆ ನಾನು ಮಾರಾಟ ಮಾಡುವಾಗಲೇ ಹೆಚ್ಚು ಬೆಲೆ ಇದ್ದು ವೈಯಕ್ತಿಕ ಹಣಕಾಸಿನ ಸಮಸ್ಯೆ ಇದ್ದುದ್ದರಿಂದ ಅವರಿಗೆ ಸ್ವಲ್ಪ ಕಡಿಮೆ ಬೆಲೆಗೆ ಮಾರಾಟ ಮಾಡಿರುತ್ತಾರೆಂದು ನುಡಿಯುತ್ತಾರೆ.

ದಿನಾಂಕ 23.05.2024 ರಂದು ಎಷ್ಟು ಗಂಟೆಗೆ ಕ್ರಯಪತ್ರ ನೋಂದಣಿಯಾಗಿರುತ್ತದೆ ಎಂದು ನನಗೆ ನೆನಪಿರುವುದಿಲ್ಲ. ನಿಪಿ-11 ರ ಕ್ರಯಪತ್ರಕ್ಕೆ ಶ್ರೀನಿವಾಸ್ ಕಡೆಯವರೇ ಸಾಕ್ಷಿದಾರರಾಗಿರುತ್ತಾರೆ. ಕ್ರಯಪತ್ರದ ದಿನ ನನಗೆ ರೂ.10 ಲಕ್ಷ ನಗದು ಹಣ ಪಾವತಿಯಾಗಿರುತ್ತದೆ. ಸಾಕ್ಷಿ ಮುಂದುವರೆದು ಉಳಿಕೆ 15 ಲಕ್ಷಕ್ಕೆ ಮೂರು ಚೆಕ್ಕುಗಳನ್ನು ನೀಡಿರುತ್ತಾರೆ. ಆ ರೀತಿ ಸದರಿ ದಿನದಂದು 10 ಲಕ್ಷ ಮಾತ್ರ ನಗದು ಹಣ ಸಂದಾಯವಾದ ಬಗ್ಗೆ ಕ್ರಯಪತ್ರದಲ್ಲಿ ನಮೂದು ಇರುವುದಿಲ್ಲ. ಸದರಿ ಜಮೀನಿಗೆ ಈಗ ಮಾರುಕಟ್ಟೆ ಬೆಲೆ ಹೆಚ್ಚಾಗಿರುವುದರಿಂದ ನಾನು ಆರೋಪಿ ಹಾಗೂ ಅವರ ಗಂಡನಿಂದ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಹಿಂದೆ ಆರೋಪಿಯು ಬೇರೆ ವ್ಯವಹಾರದಲ್ಲಿ ಭದ್ರತೆಗಾಗಿ ನೀಡಿದ ಚೆಕ್ಕುಗಳನ್ನು ದುರ್ಬಳಕೆ ಮಾಡಿಕೊಂಡು ಈ ಸುಳ್ಳು ಪ್ರಕರಣ ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**